ಮುಟ್ಟತಕ್ಕಂಥಹ ಕೆಲಸ ಆಗಿಲ್ಲ. ರಾಜಕೀಯ ಕಾರಣಕ್ಕೋಸ್ಕರ ಕೊಲೆ ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಇರತಕ್ಕ ಪ್ರಯತ್ನ ನಡೆಯುತ್ತಿದೆ.

ಉಪಾಧ್ಯಕ್ಷೆಯವರು : ನಾನು ಶ್ರೀ ಈಶ್ವರಪ್ಪನವರನ್ನು ಕರೆದಿದ್ದೇನೆ. ನೀವು ಏನು ಮತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

ವಿಷಯ: ಸೊರಬ ತಾಲ್ಲೂಕಿನ ಮರೂರು ಗ್ರಾಮದಲ್ಲಿ ನಡೆದ ಘಟನೆ

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಮುಖ್ಯಮಂತ್ರಿ ಸೊರಬ ಕ್ಷೇತ್ರದಲ್ಲಿ ಒಂದು ದಂಗುಬಡಿಯುವಂತ ಘಟನೆ ನಡೆದಿದೆ. ಎರಡನೇಯ ತಾರೀಖು ಸೊರಬ ತಾಲ್ಲೂಕು ಮರೂರು ಗ್ರಾಮದಲ್ಲಿ ಸಾಗುವಳಿ ನಾಟ್ ಕತ್ತರಿಸುವ ವಿಚಾರವನ್ನು ಸಾಗರದ ಪತ್ರಕರ್ತರಾದ ಶ್ರೀಯುತ ರಾಮಚಂದ್ರಪ್ಪ ಮತ್ತು ಸೊರಬದ ರಾಮಚಂದ್ರಶೆಟ್ಟರಿಗೆ ಈ ವಿಚಾರ ಗೊತ್ತಾಗಿ ಅಲ್ಲಿನ ಡಿ.ಎಫ್.ಓ.ರವರಿಗೆ ವಿಚಾರವನ್ನು ತಿಳಿಸಿದರು. ಡಿ.ಎಫ್.ಓ.ರವರು ಸ್ಪಾಟ್‌ಗೆ ಹೋಗಿ ನೋಡಿದರು. ಸಾಗುವಾನಿ ಮರವನ್ನು ಕಡಿದಿದ್ದು ಹೌದು. ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ತೆಗೆದುಕೊಂಡ ಯಾರು ಸಾಗುವಾನಿ ಮರಗಳನ್ನು ಕಟ್ಟುಮಾಡಿದ್ದರೋ ಆ ವ್ಯಕ್ತಿಯ ಮೇಲೆ ಕೇಸು ಹಾಕಿದರು. ಆ ವ್ಯಕ್ತಿಯ ಹೆಸರು ಬಂಡಾರಿ ದುಗ್ಗಪ್ಪ.

ಉಪಾಧ್ಯಕ್ಷೆಯವರು : ಈಗ ವಿವರಕ್ಕೆ ಹೋಗಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷೆಯವರೆ ನಾನು ಏಕೆ ಹೇಳುವುದಕ್ಕೆ ಹೊರಟಿದ್ದೇವೆಂದರೆ ಅದನ್ನು ಕಾಂಗ್ರೆಸ ಮಂಡಲ್ ಪಂಚಾಯಿತಿಯ ಸಧಸ್ಯ ಆ ವ್ಯಕ್ತಿಯ ಮೇಲೆ ಕೇಸ್ ಹಾಕಿದ್ದರು. ಮಾರನೆ ದಿನ ಬೇರೆ ಕಡೆ ಇದೇ ರೀತಿ ಸಾಗುವಾನಿ ಮರವನ್ನು ಕಟ್ಟು ಮಾಡುತ್ತಿದ್ದರು. ಪತ್ರಕರ್ತರು ಅಲ್ಲಿ ಫೋಟೋಗ್ರಾಫರ್ ಸಮೇತ ಹೋದರು. ಅಲ್ಲಿ ಹೋದಾಗ ಇವರು ಯಾರೂ ಇರಲಿಲ್ಲ, ಎಲ್ಲಾ ಓಡಿಹೋದರು. ತಕ್ಷಣ ಇವರು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಾಗ ಯಾರು ಈ ಸಾಗುವಾನಿ ಮರವನ್ನು ಕಟ್ಟುಮಾಡುತ್ತಿದ್ದರೋ ಆ ವ್ಯಕ್ತಿ ಪೋಲೀಸಿನವವರಿಗೆ ಕಂಪ್ಲೈಯಿಂಟ್ ಕೊಟ್ಟಿದ್ದಾರೆ. ಇವರನ್ನು ಅರೆಸ್ಟ್ ಮಾಡಿ ಎಂದು ಆದರೆ ಪತ್ರಕರ್ತರು.....

ಶ್ರೀ ಆರ್.ಎನ್. ನಾಯಕ್ : ಯಾವ ನಿಯಮದ ಪ್ರಕಾರ ಅವರು ಮಾತನಾಡುತಿದ್ದಾರೆ. ಅದನ್ನು ಕೇಳಿ ಅವರು ಮಾತನಾಡುವುದಕ್ಕೆ ಬರೆದು ಕಳುಹಿಸಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಬರೆದು ಕಳುಹಿಸಿ ಅವರ ಪರ್ಮಿಷನ್ ತೆಗೆದುಕೊಂಡಿದ್ದೇನೆ.

ಉಪಾಧ್ಯಕ್ಷೆಯವರು : ಈಗ ಅದರ ವಿವರಗಳನ್ನು ಕಳುಹಿಸಿಕೊಡಿ. ಬೇರೆ ಯಾವುದಾದರೂ ರೂಪದಲ್ಲಿ ಇವನ್ನು ಎತ್ತಿ ಆಗ ಸರ್ಕಾರದಿಂದ ಉತ್ತರ ಬರಲಿಕ್ಕೆ ಸಾಧ್ಯವಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸರ್ಕಾರ ನೋಡಬೇಕು ಪತ್ರಕರ್ತರಿಗೆ ಈ ರೀತಿಯ ಪರಿಸ್ಥಿತಿಯಾದರೆ ಹೇಗೆ? ಬೇರೆಯವರ ಗತಿ ಏನು? ಪತ್ರಕರ್ತರ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿರುವುದು ಇದು ಗಂಭೀರವಾದ ಪರಿಸ್ಥಿತಿ.

(ಗೊಂದಲ)

ಉಪಾಧ್ಯಕ್ಷೆಯವರು: ಮಾನ್ಯ ಮಂತ್ರಿಗಳು....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಒಂಟಿದ್ದನಿ ಪತ್ರಿಕೆಯ ರಾಮಚಂದ್ರಪ್ಪ ಮತ್ತು ಇನ್ನೊಬ್ಬರು ಶಿವಾಜಿ ಇಬ್ಬರು ಪತ್ರಕರ್ತರ ಮೇಲೆ ಕಳ್ಳಸಾಗಣಿಕೆ ಕೇಸನ್ನು ಹಾಕಿದ್ದಾರೆ.

(ಗೊಂದಲ)

ಉಪಾಧ್ಯಕ್ಷೆಯವರು : ತಾವು ಇದನ್ನೆಲ್ಲಾ ಕಳುಹಿಸಿಕೊಡಿ. ಸರ್ಕಾರದವರು ಏವರು ಏನು ಹೇಳುತ್ತಾರೊ ಕೇಳೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಪ್ರಮಾದವನ್ನು ನೋಡುವುದಕ್ಕೆ ಹೋಗಿ ಅನ್ಯಾಯವನ್ನು ನೋಡುವುದಕ್ಕೆ ಪತ್ರಕರ್ತರು ಅಲ್ಲಿಗೆ ಹೋದರೆ ನೀವೇ ಕಳ್ಳತನವನ್ನು ಮಾಡಿದ್ದೀರಿ ಎಂದು ಹೇಳಿ ಅವರ ಮೇಲೆ ಕೇಸನ್ನು ಹಾಕಿ ಈ ರೀತಿಯಾಗಿ ಅರಣ್ಯ ಇಲಾಖೆಯವರು ಮಾಡಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು.

(ಗೊಂದಲ)

ಉಪಾಧ್ಯಕ್ಷೆಯವರೆ : ಆಯಿತು. ಹೇಳಿದ್ದೀರಿ. ಅವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಅದಕ್ಕೇ ಹೇಳುತ್ತಿದ್ದೇನೆ. ನಿರ್ಭೀತಿಯಿಂದ ಪತ್ರಕರ್ತರು ಕೆಲಸವನ್ನು ಮಾಡಬೇಕೋ ಬೇಡವೋ ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇದೆಯೋ ಇಲ್ಲವೋ?

(ಗೊಂದಲ)

ಉಪಾಧ್ಯಕ್ಷೆಯವರು : ಈಗ ಸ್ವಲ್ಪ ತಾವು ಒಂದು ನಿಮಿಷ ಕುಳಿತುಕೊಳ್ಳಿ ಮಾನ್ಯ ಮಂತ್ರಿಗಳು ಅವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಪತ್ರಕರ್ತರ ಮೇಲೆ ಪೋಲೀಸ್ ಇಲಾಖೆಯವರು ಕೇಸನ್ನು ಹಾಕಿದ್ದಾರೆ.

ಉಪಾಧ್ಯಕ್ಷೆಯವರು : ಈಗ ಎಲ್ಲಾ ವಿವರಗಳಿಗೂ ಹೋಗುವುದಕ್ಕೆ ಸಾಧ್ಯವಿಲ್ಲ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷೆಯವರೇ ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಅಥವಾ ಯಾವುದೇ ಮೂಲಕ ಎತ್ತುವುದಕ್ಕೆ ಸಾಕಷ್ಟು ಅವಕಾಶ ಇದೆ. ಆ ರೀತಿ ಎತ್ತಿದ ಕೂಡಲೇ ನಾವು ಅಡ್ಡಿ ಬರುತ್ತೇವೆ ಎಂದೇನೂ ಇಲ್ಲ. ಆದರೆ ತಾವು ಪ್ರಸ್ತಾವನೆಯನ್ನು ಕಳುಹಿಸಿದ್ದೀರಿ. ಆ ನಿಲುವಳಿ ಸೂಚನೆಯನ್ನು ಎತ್ತಲಿಕ್ಕೆ ತಾವು ಪ್ರಾಸ್ತಾವಿಕವಾಗಿ ಅವಕಾಶವನ್ನು ತಾವು ಕೊಟ್ಟಿದ್ದೀರಿ. ಇಲ್ಲಿ ತಾವು ಎಲ್ಲರು ಹೆಸರನ್ನು ಇಲ್ಲಿ ತಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಶೂನ್ಯ ವೇಳೆಯಲ್ಲಿ ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥ ವಿಚಾರ. ಈ ಅಧಿವೇಶನ ಇನ್ನೇರಡು ದಿವಸಗಳು ಮಾತ್ರ ಇದೆ. ಎರಡು ದಿವಸಗಳಲ್ಲಿ ಏನು ಮಾಡಬೇಕು ಹೇಳಿ, ಇರುವುದೇ ಎರಡು ದಿವಸ. ಇದು ಗಂಭೀರವಾದ ಪ್ರಸಂಗ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರ ಏನು ಮಾಡುತ್ತಿದೆ? ಪತ್ರಕರ್ತರನ್ನು ತಾವು ರಕ್ಷಣೆ ಮಾಡುತ್ತೀರಾ? ಅಥವಾ ಮರವನ್ನು ಕಡಿದವರನ್ನು ರಕ್ಷಣೆ ಮಾಡುತ್ತೀರಾ? ಆ ಅಪರಾಧಿಗಳನ್ನು ತಾವು ರಕ್ಷಣೆ ಮಾಡುತ್ತೀರಾ ಎಂದು ಹೇಳಬೇಕು.

(ಗೊಂದಲ)

ಶ್ರೀ ಎಂ ವೀರಪ್ಪಮೊಯಿಲಿ : ಘಟನೆ ನಡೆದ ಬಗ್ಗೆ ತಾವು ಪ್ರಸ್ತಾಪ ಮಾಡಲಿ. ಅದರೆ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಒತ್ತಡ ಬಂದಿದೆ. ಇದರಲ್ಲಿ ರಾಜಕಾರಣಿಗಳು ಇದ್ದಾರೆ. ಕಾಂಗ್ರೆಸ್ (ಐ) ಕಾರ್ಯಕರ್ತರು ಇದ್ದಾರೆ. ಇದೆಲ್ಲಾ ಕಡತಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಇದನ್ನೆಲ್ಲಾ ಪ್ರಸ್ತಾಪ ಮಾಡಲಿಕ್ಕೆ he has to give it in writing.

(ಗೊಂದಲ)

ಕೆ.ಎಸ್. ಈಶ್ವರಪ್ಪ : ಡಿ.ಎಫ್.ಓ. ಅವರು ಅವರ ಮೇಲೆ ಕೇಸನ್ನು ಹಾಕಿದ್ದಾರೆ.

(ಗೊಂದಲ)

ಶ್ರೀ ಎಂ ವೀರಪ್ಪ ಮೊಯಿಲಿ : ಯಾವುದೇ ವ್ಯಕ್ತಿಯ ಮೇಲೆ ಅಧಿಕಾರದಲ್ಲಿ ಇದ್ದವರ ಮೇಲೆ ಅಧಿಕಾರದಲ್ಲಿ ಇಲ್ಲದವರ ಮೇಲೆ ಆಪಾದನೆ ಹಾಕುವುದು ಇದ್ದರೆ ಅವರು ಬರೆದುಕೊಡಬೇಕು. ಆ ರೀತಿ ಬರೆದುಕೊಡದಿದ್ದರೆ ಆಪಾದನೆಗಳನ್ನು ಎತ್ತುವುದಕ್ಕೆ ಅವರು ಅಧಿಕಾರವಿಲ್ಲ. ಅದು ಹೋಗುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಇಲ್ಲಿ ಕೇಳಿ ಘಟನೆ ನಡೆದ ಬಗ್ಗೆ ಹೇಳಿ. ತಾವೇ ಇದನ್ನು ಪ್ರಾರಂಭಿಸಿ ಇಲ್ಲಿ ಏನು ಹೇಳಿದ್ದಾರೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ನಿಲುವಳಿ ಸೂಚನೆಯ ಪ್ರಕಾರ ಪತ್ರಕರ್ತರ ಮೇಲೆ ಕಾದುಕೊಳ್ಳದ ಬಗ್ಗೆ ವರದಿ ಮಾಡಿರತಕ್ಕಂಥ ಪತ್ರಕರ್ತರು ಸಾಮಾಜಿಕ ಕಾರ್ಯಕರ್ತರ ಮೇಲೆ ಕೇಸನ್ನು ದಾಖಲು ಮಾಡಿರುವ ವಿಷಯದಲ್ಲಿ ಪ್ರಸ್ತಾಪ ಮಾಡಲಿ. ನಾವೇನೂ ಇದಕ್ಕೆ ಅಡ್ಡಿ ಬರುವುದಿಲ್ಲ. ಆದರೆ ಏತನ್ಮಧ್ಯೆ ಏನು ಮಾಡಿದ್ದಾರೆ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಒತ್ತಡ ಬಂದಿದೆ. ಇದು ಒಂದು ಕಾಂಗ್ರೆಸ್ (ಐ) ಕಾರ್ಯಕರ್ತರಿಂದ ಒತ್ತಡ ಬಂದಿದೆ. ಈ ರೀತಿ ಯಾವುದೇ ಒಂದು ಆಪಾದನೆಯನ್ನು ಮುಖ್ಯಮಂತ್ರಿಯವರ ಮೇಲಾಗಲಿ ಅವರ ಕಛೇರಿಯ ಮೇಲಾಗಲಿ ಹೇಳಿದರೆ ಆ ಜವಾಬ್ದಾರಿಯನ್ನು ತಾವು ಹೊರಬೇಕಾದರೆ ತಾವು ಜವಾಬ್ದಾರಿಯನ್ನು ಹೊರುವುದಕ್ಕೆ ತಮಗೆ ಶಕ್ತಿ ಇದ್ದರೆ ಅದನ್ನು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಶಿಕಾರಿಪುರದಲ್ಲಿ ಗಂಧದಮರಗಳನ್ನು ಕಡಿಯುತ್ತಿದ್ದಾರೆ ಎಂದು ನಾನು ಆಪಾದನೆ ಮಾಡುತ್ತೇನೆ. ಅದನ್ನು ತೆಗೆದುಕೊಳ್ಳಿ ಅಲ್ಲಿ ಗಂಧದ ಮರಗಳನ್ನು ಕಡೆಯುವವರು ಶಿಕಾರಿಪುರದಲ್ಲಿ ಇಲ್ಲವಾ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಈ ತರಹ ನೇರವಾಗಿ ಆಪಾದನೆ ಮಾಡತಕ್ಕಂಥದ್ದು ನಾವು ಇಲ್ಲಿ ರಾಜಕೀಯ ಬಂಡವಾಳವನ್ನಾಗಿ ಮಾಡಕೊಳ್ಳಬಾರದು.

ತಾವು ಗುರುತರವಾದಂಥ ಆಪಾದನೆಯನ್ನು ಮಾಡಿದ್ದೀರಿ. ಪತ್ರಕರ್ತರ ಮೇಲೆ ಕೇಸನ್ನು ದಾಖಲು ಮಾಡಿದ್ದೀರಿ ಎಂದು ತಾವು ಆಪಾದನೆ ಮಾಡಿದ್ದೀರಿ ಇದು ಗುರುತರವಾದುದು ಈ ರೀತಿ ಆದರೆ ಅದರ ಪಾವಿತ್ರ್ಯತೆ ಹೋಗುತ್ತದೆ.

(ಗೊಂದಲ)

ನೀವು ರಾಜಕೀಯ ಬೆರಸಿದರೆ ನಿಮ್ಮ ಆಪಾದನೆ ಇರತಕ್ಕಂಥ ಗಾಂಭೀರ್ಯತೆ ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ನಾವು ವರದಿ ತರಿಸಿ ಸಂಜೆಯೊಳಗೆ ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಪತ್ರಕರ್ತರ ಮೇಲೆ ಮೊಕದ್ದಮೆ ಹಾಕಿರತಕ್ಕದ್ದು ನಿಜ. ಅದನ್ನು ಹಾಕತಕ್ಕಂಥ ವಿಚಾರವಲ್ಲ.

ಉಪಾಧ್ಯಕ್ಷಿಣಿಯವರು : ಈಗ ತಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ಅದರ ಜೊತೆ ಯಾವ ರೆಕಾರ್ಡ್ಸ್ ಅನ್ನು ತಾವು ಲಗತ್ತಿಸಿಲ್ಲ. ಬರೀ ಒಂದು ಕಾಗದ ಮಾತ್ರ ಕೊಟ್ಟಿದ್ದೀರಿ. ರೆಕಾರ್ಡ್ ಇದೆ ಕಳುಹಿಸಿ. ಅದನ್ನು ಪರಿಶೀಲಿಸಿ ಅನಂತರ ನಾನು ತೀರ್ಮಾನಕ್ಕೆ ಬರುತ್ತೇನೆ.

ವಿಷಯ: ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ ತಮ್ಮಲ್ಲಿ ನಾನು ಮನವಿ ಮಾಡಿದ್ದೆ. ತಮ್ಮ ಕಾರ್ಯಾಲಯಕ್ಕೆ ಬಂದು ಮಾತನಾಡುತ್ತಿದ್ದೇನೆ ಇನ್ನೊಂದು ವಿಚಾರವನ್ನು ವಿದ್ಯಾ ಸಚಿವರ ಗಮನಕ್ಕೆ ತರುತ್ತೇನೆ. ಈ ಡಾ॥ ಸರೋಜಿನಿ ಮಹಿಷಿ ವರದಿ ಜಾರಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ನೀತಿ ಏನು? ಮತ್ತು ಹಂಪೆಯಲ್ಲಿ ಕನ್ನಡ ವಿಶ್ವವಿಧ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ತಮ್ಮ ನಿಲುವು ಎಂಬುದನ್ನು ಇದುವರೆಗೂ ಸ್ಪಷ್ಟಪಡಿಸಿಲ್ಲ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಈ ಬಗ್ಗೆ ಸವಿಸ್ತಾರವಾಗಿ ಈ ಸದನದಲ್ಲಿ ಹೇಳಿಕೆಯನ್ನು ತಾವು ಕೊಡಬೇಕು. ಯಾವಾಗ ಹಂಪೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುತ್ತೀರಿ? ಡಾ॥ ಸರೋಜಿನಿ ಮಹಿಷಿ ವರದಿಯನ್ನು ಯಾವಾಗ ಜಾರಿಗೆ ತರುತ್ತೀರಿ? ತಮ್ಮ ಸರ್ಕಾರದ ನೀತಿಗಳೇನು? ನಿಯಮಗಳೇನು? ಇದುವರೆಗೆ ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು? ಈ ಬಗ್ಗೆ ಸರ್ಕಾರದವರು ಹೇಳಿಕೆ ಕೊಡಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಈ ಪ್ರಶ್ನೆ ಎತ್ತಿದ್ದಾರೆ ಮಾನ್ಯ ಈಶ್ವರಪ್ಪನವರಿಗೆ ಇದು ರಾಜಕೀಯ ಆದರೆ ವಾಟಾಳ್ ನಾಗರಾಜ್‌ರವರಿಗೆ ಮತ್ತು ನಮಗೆ ಇದು ಜೀವನ ಪಣದ ಪ್ರಶ್ನೆ ನೀವು ದಯವಿಟ್ಟು ರಾಜಕೀಯ ತರಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರು ಬಹುಶಃ ತಿಳಿದುಕೊಂಡಿರಬಹುದು. ಕೊನೆ ದಿವಸ ಏನಾದರೂ ರಾಜಕೀಯ ಬಂಡವಾಳ ತಬ್ಬಿಕೊಂಡು ಬಾಚಿಕೊಂಡು ಹೋಗಿಬಿಡೋಣ ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ. please don't make politics here. ರಾಜಕೀಯ ಬೆರೆಸಿ ಮಾತನಾಡುವ ತಮ್ಮ ಪ್ರವೃತ್ತಿ ಏನಿದೆ ಇದಕ್ಕೆ ಕಡಿವಾಣ ಹಾಕದೇ ಇದ್ದರೆ ತಮ್ಮ ವ್ಯಕ್ತಿತ್ವಕ್ಕೆ ಕುಂದು. ಮಾನ್ಯ ವಾಟಾಳ್ ನಾಗರಾಜ್‌ರವರು ಸರೋಜಿನಿ ಮಹಿಷಿ ವರದಿ ಬಗ್ಗೆ